ತರ್ಕ. ಇಲ್ಲದಿದ್ದರೆ ಈ ವಯಸ್ಸಿನಲ್ಲಿ ಒಬ್ಬೊಬ್ಬರನ್ನೇ ಯಾರು ಕಳಿಸುತ್ತಾರಂತೆ?

ಅವನ ಅಂದಾಜು ನೂರಕ್ಕೆ ನೂರು ಸತ್ಯ ಆಯ್ತು. ಮಾರನೆಯ ದಿನ ಬೆಳಿಗ್ಗೆ ರಾಯರ ಮಗ ಕಾರಿನಲ್ಲಿ ಬಂದಿಳಿದ.

"ಹುಡುಕದ ಜಾಗ ಇಲ್ಲ, ಕೇಳದ ಜನ ಇಲ್ಲ. ಪೊಲೀಸ್ ಕಂಪ್ಲೇಂಟೂ ಕೊಟ್ಟಿದೀನಿ. ಅಪ್ಪ ಹೀಗೆ ಮಾಡ್ಬೋದಾ? ಇಂತಲ್ಲಿ ಬಂದಿದಾರೆ ಅಂತ ನಮಗೆ ಗೊತ್ತಾಗೋಕೆ ಸಾಧ್ಯಾನೇ ಇರ್ಲಿಲ್ಲ..."

"ಇರ್ಲಿ ಬಿಡಿ, ವಯಸ್ಸಾದೋರ ಸಾವಾಸ..." ಅವನ ಮುಜುಗರವನ್ನು ಕಮ್ಮಿ ಮಾಡಲು ಹಿತದ ಮಾತಾಡಿದ ವೆಂಕಪ್ಪಯ್ಯನ ಮಗ. ಕಾಫಿ, ತಿಂಡಿಯ ಉಪಚಾರ ಯಥಾಸಾಂಗವಾಗಿ ನಡೆದು ಅಪ್ಪನ ಜೊತೆ ಅವನು ಹೊರಟು ನಿಲ್ಲುವಷ್ಟರಲ್ಲಿ ಶ್ರೀನಿವಾಸರಾಯರ ಬೆನ್ನ ಹಿಂದೆ ಇನ್ನಷ್ಟು ಮಾಹಿತಿ ಒಟ್ಟಾಗಿತ್ತು. ಉಂಡಿದ್ದು, ತಿಂದಿದ್ದು ಮರೆತೇ ಹೋಗುತ್ತಿತ್ತು ರಾಯರಿಗೆ. 'ಕಾಫಿ ಕೊಟ್ಟೇ ಇಲ್ಲ, ತಿಂಡಿ ಕೊಟ್ಟೇ ಇಲ್ಲ...' ಎನ್ನುವ ಪುಕಾರು. ಹೋದಹೋದಲ್ಲಿ ಇಂತಾದ್ದೇ ದೂರು. ಅವರ ಉಳಿತಾಯದ ಮೇಲೆ ಮನೆಯವರು ಕಣ್ಣಿಟ್ಟಿದ್ದಾರೆ ಎನ್ನುವುದು ಇತ್ತೀಚೆಗೆ ಶುರುವಾದ ಭ್ರಮೆ. ಅವರ ಪೆನ್ಷನ್ ದುಡ್ಡು ನಾವು ತೆಗೆಯೋಕೆ ಬರುತ್ತಾ? ಏನೋ ಕಿತಾಪತಿ ಮಾಡಿ ನಾವು ದುಡ್ಡು ಹೊಡೀತೀವಿ ಅಂದ್ಕೊಂಡಿದಾರೆ. ಕೈಲಿ ದುಡ್ಡಿದ್ದರೆ ಯಾರಿಗೆ ಎಷ್ಟು ಕೊಟ್ಟೆ, ಎಷ್ಟು ಚಿಲ್ಲರೆ ವಾಪಸು ತೆಗೆದುಕೊಂಡೆ ಎನ್ನುವುದು ಗೊತ್ತೇ ಆಗದಷ್ಟು ಮರೆವು. 'ಹೀಗಲ್ಲ ಹೀಗೆ ಎಂದರೆ ಗ್ರಾಸ್ತ ಒಪ್ಪಲು ಸಿದ್ಧರಿಲ್ಲ. ಹೇಳದೆ ಕೇಳದೆ ಅಪ್ಪ ಮನೆ ಬಿಟ್ಟು ಬಂದಿದ್ದು ಯಾಕೇಂತ ಗೊತ್ತಾ? ಮನೇಲಿ ಊಟ ಹಾಕ್ಲಿಲ್ಲ ಅಂತ ಯಾರದೋ ಮನೇಲಿ ಉಂಡು ಬಂದಿದ್ರು. ದೇವರಾಣೆ ಹೇಳ್ಬೇಕು ಅಂದ್ರೆ ನನ್ನ ಜೊತೇನೇ ಕೂತು ಊಟ ಮಾಡಿದ್ರು ಅಪ್ಪ. ಊಟ ಹಾಕಿದ ಆ ಮನೆಯೋರು "ಹಿರಿಯರ ಹೊಟ್ಟೆ ಉರಿಸ್ಬಾರ್ದು ಕಣ್ರೀ. ಉದ್ಧಾರಾಗಲ್ಲ" ಅಂತ ನನ್ನ ಮುಖಕ್ಕೆ ಹೊಡೆದ ಹಾಗೆ ಹೇಳಿದ್ರೆ ಹೇಗೆ ಸಹಿಸ್ಬೇಕು ಹೇಳಿ? "ಇನ್ಮೇಲೆ ಮನೆ ಬಿಟ್ಟು ಹೊರಗೆ ಕಾಲಿಡ್ಬೇಡ ಅಂತ ಜೋರಾಗಿ ಎರಡು ಮಾತು ಅಂದೆ. ಅದೇ ಹೆಚ್ಚಾಯ್ತು ಅಪ್ಪಂಗೆ. ಎಲ್ಲರ ಕಣ್ಣು ತಪ್ಪಿಸಿ ಮನೆ ಬಿಟ್ಟು ಪರಾರಿ. ಹೇಳ್ತಾ ಹೋದ್ರೆ ದೊಡ್ಡ ರಾಮಾಯಣಾನೇ ಉಂಟು..." ಎನ್ನುತ್ತಾ ಅಪ್ಪನನ್ನು ಕರೆದು ಕಾರು ಹತ್ತಿದ್ದ ಮಗ. ಎರಡು ದಿನ ಯಾವ ಮಾಯಕದಲ್ಲಿ ಕಳೆದುಹೋಯ್ತೋ ಗೊತ್ತೇ ಆಗದೆ ಕುಶಾಲಿನಿಂದ ಕಾಲ ಕಳೆದಿದ್ದ ವೆಂಕಪ್ಪಯ್ಯ ಗೆಳೆಯನನ್ನು ಹೊತ್ತ ಕಾರು ಕಣ್ಮರೆಯಾಗುತ್ತಿದ್ದಂತೆ ಉದ್ಗಾರ ಹೊರಡಿಸಿದ್ದರು,

"ನೋಡಿದ್ಯಾ ಅವನನ್ನ? ಗುಮ್ಮನಗುಸುಕನ ಥರ ಕಾಣ್ತಾನೆ. ಅಪ್ಪನ್ನ ನೋಡ್ಕೊಳ್ಳೋಕಾಗ್ದಿರೋ ಇಂತಾ ಮಕ್ಕಳು ಇದ್ರೆಷ್ಟು, ಬಿಟ್ರೆಷ್ಟು? ನಿನ್ನ ಕಿವಿ ಕಚ್ಚಿದ್ನಲ್ಲ, ಏನಂತೆ ಸಮಾಚಾರ?"

"ಏನಿಲ್ಲ, ಏನಿಲ್ಲ..." ಎನ್ನುತ್ತಾ ಉಗುಳು ನುಂಗಿಕೊಂಡ ವೆಂಕಪ್ಪಯ್ಯನ ಸುಪುತ್ರ.


### ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.